ತಕ್ಷಣ ಎರಡು ಮೂರು ದಿವಸಗಳ ತಡೆಯಾಜ್ಞೆಯನ್ನು ಕೊಟ್ಟು ನಿಮ್ಮ ಜೊತೆ ಸಮಾಲೋಚನೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ. ಉಳಿದಿದ್ದನ್ನು ಆಯ್ಕೆ ಮಾಡುವುದನ್ನು ಮುಂದಕ್ಕೆ ಹಾಕುತ್ತೇವೆ.

ಅಧ್ಯಕ್ಷರು: ಕೆ.ಎಂ. ಕೃಷ್ಣಮೂರ್ತಿಯವರೆ, ನಿಮ್ಮದೂ ಕೂಡ ಸಿಮಿಲರ್ ಇದೆ, ಉತ್ತರವನ್ನು ಕೊಟ್ಟಿದ್ದಾರೆ, ನಿಮ್ಮದು ಇನ್ನೇನಾದರೂ ಬೇರೆ ಇದೆಯಾ?

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಈಗ ಆಯ್ಕೆ ಯಾವ ರೀತಿಯಾಗಿ ಮಾಡುವುದೆಂಬುದರ ಬಗ್ಗೆ ಪ್ರಸ್ತಾಪವಾಗಿದೆ. ಇಲ್ಲಿ ನಮ್ಮ ಪ್ರಶ್ನೆ ಏನೆಂದರೆ ಆಯಾ ಕ್ಷೇತ್ರದಲ್ಲಿ ಶಾಸಕರನ್ನು ಏಕೆ ಛೇರ್ಮನ್ ಮಾಡಬಾರದಾಗಿತ್ತು? ಅದಕ್ಕೆ ಮಾನ್ಯ ಯಡಿಯೂರಪ್ಪನವರು ಭರವಸೆಯನ್ನು ಕೊಡಬೇಕಾಗಿತ್ತು. ನಾನು ನನ್ನ ಅಭಿಪ್ರಾಯವನ್ನು ಹೇಳುತ್ತೇನೆ, ನಾನು ಹೇಳಿರುವುದಕ್ಕೆ ಸರಿಯಾದ ಉತ್ತರವಿಲ್ಲ, ನಾನು ಕೇಳಿರುವುದು ನಿಯಮಾವಳಿ ಏನೆಂದು? ಆ ನಿಯಮಾವಳಿಗಳನ್ನು ಅಧಿಕಾರಿಗಳಿಗೆ ಹೇಳಿ ಈಗ ಸರಿ ಮಾಡುತ್ತೇವೆಂದು ಹೇಳುತ್ತಿದ್ದಾರೆ, ನಿಯಮಾವಳಿಗಳನ್ನು ಮಾಡಬೇಕಾದರೆ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿಯಾಗಬೇಕು.

ಅಧ್ಯಕ್ಷರು: ನಾಳೆ ನಾಡಿದ್ದು ಕುಳಿತುಕೊಂಡು ಎಲ್ಲರೊಡನೆ ಸಮಾಲೋಚನೆ ಮಾಡಿ, ನಮ್ಮದು ಮಾನಸಿಕವಾಗಿ ಅದೇ ಇದೆ ಎಂದು ಸ್ಪಷ್ಟವಾಗಿ ಮುಗುಂ ಆಗಿ ಹೇಳಿದ್ದಾರಲ್ಲಾ, ಮತ್ತೇಕೆ ಗಲಾಟೆ ಮಾಡಿಕೊಳ್ಳುತ್ತೀರಿ ಕುಳಿತುಕೊಳ್ಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಒಪ್ಪಿಗೆ ಆಯಿತು, ಅದನ್ನು ಎಷ್ಟು ದಿವಸದಲ್ಲಿ ಮಾಡುತ್ತಾರೆಂಬುದಾಗಬೇಕು, ಈಗ ಅಲ್ಲೇನಾದರೂ ಆಯ್ಕೆ ನಡೆದರೆ ನಮಗೆ ಬಹಳ ಅನ್ಯಾಯವಾಗುತ್ತದೆ.

(ಇ) ವಿಷಯ: ಸವಣೂರು–ಶಿರೇವಾಡ ರಸ್ತೆ ದುರಸ್ತಿ ಬಗ್ಗೆ

ಶ್ರೀ ಮಲ್ಲಿಕಾರ್ಜುನ ಎಸ್. : ಮಾನ್ಯ ಅಧ್ಯಕ್ಷರೆ, ಬಹಳ ಪ್ರಮುಖವಾದ ನಮ್ಮ ಕ್ಷೇತ್ರದಲ್ಲಿ ಸವಣೂರು–ಶಿರೇವಾಡ ರಸ್ತೆ ಬಹಳ ಹದಗೆಟ್ಟಿರುವುದರಿಂದ, 17 ಕಿಲೋ ಮೀಟರ್ ಈ ರಸ್ತೆ ಎರಡು ಜಿಲ್ಲೆಯನ್ನು ಸಂಪರ್ಕಿಸುವಂತಹ ರಸ್ತೆಯಾಗಿದೆ. ಬಹಳ ವರ್ಷಗಳಿಂದ ನಾವು ಈ ಸದನದಲ್ಲಿ ಒತ್ತಾಯ ಮಾಡುತ್ತಾ ಬಂದಿದ್ದೇವೆ, ಸವಣೂರು–ಶಿರೇವಾಡ ರಸ್ತೆ 15 ಹಳ್ಳಿಗಳನ್ನು ದಾಟಿ ಇವತ್ತು ಎರಡು ಜಿಲ್ಲೆಗಳನ್ನು ಲಿಂಕ್ ಮಾಡತಕ್ಕಂಥ ರಸ್ತೆಯಾಗಿದೆ. ಇವತ್ತು ಮಳೆಯಾಗಿ ಸಂಪೂರ್ಣವಾಗಿ ರಸ್ತೆ ಕಟ್ಟು ಹೋಗಿದೆ, ಈಗಾಗಲೇ ಹಾವೇರಿಗೆ ಬರತಕ್ಕಂಥ ಕೆಲವೊಂದು ರಸ್ತೆಯನ್ನು ಸರ್ಕಾರ ರಿಪೇರಿ ಮಾಡಿದರೆ ಧಾರವಾಡ

ಜಿಲ್ಲೆಯಲ್ಲಿ ಬರುವ ಸವಣೂರು–ಶಿರೇವಾಡ ರಸ್ತೆ ಬಹಳ ಹದಗೆಟ್ಟಿರುತ್ತದೆ, ಪ್ರತಿ ದಿವಸ ಎರಡು ಸಾವಿರ ವಾಹನಗಳಿಗೆ ಸಂಪರ್ಕವನ್ನು ಕಲ್ಪಿಸುವಂತಹ ರಸ್ತೆಯಾಗಿರುವುದರಿಂದ ಆ ಭಾಗದ ರೈತರಿಗೆ ಹಾಗೂ ಆ ಭಾಗದ ಎಲ್ಲಾ ಶಾಲೆಯ ವಿದ್ಯಾರ್ಥಿಗಳಿಗೂ ಕೂಡ ಇವತ್ತು ತೊಂದರೆಯಾಗಿದೆ. ಹಲವಾರು ಸಾರಿ ಈ ಸದನದಲ್ಲಿ ಸರ್ಕಾರವನ್ನು ಒತ್ತಾಯ ಮಾಡಿದರು ಕೂಡ, ಈ ರಸ್ತೆಯನ್ನು ಯಾವುದೇ ಯೋಜನೆಯನ್ನು ತೆಗೆದುಕೊಳ್ಳದೆ, ಇವತ್ತು ಆ ಭಾಗದ ಎಲ್ಲಾ ರೈತರಿಗೂ ಹಾಗೂ ಜನರಿಗೆ ಬಹಳ ಅನ್ಯಾಯವಾಗಿದೆ. ಬರತಕ್ಕಂಥ ಯೋಜನೆಗಳಲ್ಲಿ ಈ ರಸ್ತೆಯನ್ನು ತೆಗೆದುಕೊಂಡು ಸರ್ಕಾರ ಸಂಪೂರ್ಣವಾಗಿ ಅಭಿವೃದ್ಧಿಪಡಿಸಬೇಕೆಂದು ತಮ್ಮ ಮುಖಾಂತರ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಸಚಿವರು) ಮಾನ್ಯ ಅಧ್ಯಕ್ಷರೆ, ಹಾವೇರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಸವಣೂರು–ಶಿರೇವಾಡ ರಸ್ತೆಯ ಆಯ್ದ ಭಾಗಗಳನ್ನು 2004–05ನೇ ಸಾಲಿನ ಕೇಂದ್ರ ರಸ್ತೆ ನಿಧಿ ಅಡಿಯಲ್ಲಿ ರೂ.80.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಂಡು 7.50 ಕಿಮೀ ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ.

ಕುಂದಗೋಳ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಸವಣೂರು–ಶಿರೇವಾಡ ಜಿಲ್ಲಾ ಮುಖ್ಯ ರಸ್ತೆ (ಕಿಮೀ 20.00 ರಿಂದ 37.80 ರವರೆಗೆ) ಒಟ್ಟು 17.80 ಕಿಮೀ ರಸ್ತೆಯನ್ನು ಕೇಂದ್ರ ರಸ್ತೆ ನಿಧಿ ಅಡಿಯಲ್ಲಿ ಅಭಿವೃದ್ಧಿಪಡಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. ಅನುದಾನದ ಲಭ್ಯತೆಯ ಮೇರೆಗೆ ಮುಂಬರುವ ಸಾಲುಗಳಲ್ಲಿ ಕಾಮಗಾರಿಯನ್ನು ತೆಗೆದುಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಮಲ್ಲಿಕಾರ್ಜುನ ಎಸ್. ಅಕ್ಕಿ: ಮಾನ್ಯ ಅಧ್ಯಕ್ಷರೆ, ಅಲ್ಲಿ ವಾಹನಗಳು ಓಡಾಡುವಂತಹ ಪರಿಸ್ಥಿತಿ ಇಲ್ಲ. ಎಷ್ಟು ಹಣವನ್ನು ನೀವು ಮಂಜೂರು ಮಾಡುತ್ತೀರಿ ಹಾಗೂ ಎಷ್ಟು ದಿವಸಗಳೊಳಗೆ ಆ ರಸ್ತೆಯನ್ನು ಸಂಪೂರ್ಣವಾಗಿ ಅಭಿವೃದ್ಧಿ ಮಾಡಿ ಕೊಡುತ್ತೀರಿ ಎಂಬ ಬಗ್ಗೆ ಸ್ಪಷ್ಟವಾದ ಉತ್ತರ ಕೊಡಬೇಕು. ಸದನದಲ್ಲಿ ಹಲವಾರು ಸಾರಿ ಕೂಡ ಒತ್ತಾಯ ಮಾಡಿದರೂ 1 ಲಕ್ಷ ರೂಪಾಯಿ ಸಹ ಕೊಡಲಿಲ್ಲ. ಹಾವೇರಿ ಜಿಲ್ಲೆಯಲ್ಲಿ ಬರತಕ್ಕಂತಹ ರಸ್ತೆ ಡಾಂಬರೀಕರಣ ಮಾಡಿದಿರಿ, ಕುಂದಗೋಳ ಭಾಗದಲ್ಲಿ ಬರತಕ್ಕ ರಸ್ತೆ ಏನಿದೆ ಒಂದು ಬಸ್ ಕೂಡ ಅಡ್ಡಾಡುವುದಕ್ಕೆ ಆಗದ ರೀತಿಯಲ್ಲಿ ಸಂಪೂರ್ಣವಾಗಿ ಹಾಳಾಗಿದೆ. ಎಷ್ಟು ಹಣ ಮಂಜೂರು ಮಾಡುತ್ತೀರಿ, ಯಾವ ಅವಧಿಯಲ್ಲಿ ಆ ರಸ್ತೆಯನ್ನು

ಸಂಪೂರ್ಣವಾಗಿ ಅಭಿವೃದ್ಧಿ ಮಾಡಿ ಕೊಡುತ್ತೀರಿ ಎಂದು ಅಧ್ಯಕ್ಷರ ಮುಖೇನ ತಮಗೆ ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, 80 ಲಕ್ಷ ರೂಪಾಯಿ ಖರ್ಚು ಮಾಡಿ 7.50 ಕಿಲೋಮೀಟರ್ ರಸ್ತೆ ಅಭಿವೃದ್ಧಿ ಮಾಡಿದ್ದೇವೆ. ಅವರ ಭಾಗದಲ್ಲಿ 7.50 ಕಿಲೋ ಮೀಟರ್ ರಸ್ತೆ ವಾಹನ ಸಂಚಾರಕ್ಕೆ ಸರಿಯಾಗಿ ಇಲ್ಲವೆಂದು ಹೇಳಿದ್ದಾರೆ. ಅದರ ಬಗ್ಗೆ ಪ್ರಸ್ತಾವನೆ ತರಿಸಿ ಸರ್ಕಾರದ ಮಟ್ಟದಲ್ಲಿ ಪರಿಶೀಲನೆ ಮಾಡಿ, ಅತಿ ಶೀಘ್ರವಾಗಿ ಇದರ ಬಗ್ಗೆ ಅನುದಾನದ ಲಭ್ಯತೆ ಮಾಡಿ ಆದ್ಯತೆ ಮೇರೆಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಸವರಾಜ್ ಸಜ್ಜನರ್: ನನ್ನದು ಒಂದು ಗಮನ ಸೆಳೆಯುವ ಸೂಚನೆ ಇದೆ ಅಧ್ಯಕ್ಷರೆ,

ಅಧ್ಯಕ್ಷರು: ನಿಮ್ಮ ಗಮನ ಸೆಳೆಯುವ ಸೂಚನೆ ಈಗ ಬರುವುದಿಲ್ಲ. ಇದು ಶೂನ್ಯ ವೇಳೆ. ಶೂನ್ಯ ವೇಳೆಯಲ್ಲಿ ಗಮನ ಸೆಳೆಯುವ ಸೂಚನೆಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ಸೋಮವಾರ ಅವಕಾಶ ಮಾಡಿ ಕೊಡುತ್ತೇನೆ. ಮಾನ್ಯ ಶ್ರೀರಾಮರೆಡ್ಡಿಯವರೇ, ನಿಯಮ 69ರ ಅಡಿಯಲ್ಲಿ ಈಗ ಚರ್ಚೆ ಪ್ರಾರಂಭ ಮಾಡುತ್ತೀರೋ ಅಥವಾ ಸೋಮವಾರ ಮಾಡುತ್ತೀರೋ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸೋಮವಾರ ಮಾತನಾಡುತ್ತೇನೆ.

ಅಧ್ಯಕ್ಷರು: ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ತೀರ್ಮಾನ ಆಗಿರುವ ರೀತಿಯಲ್ಲಿ ನಾಳೆ ಸದನ ಇರುವುದಿಲ್ಲ. ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸದನ ಸೇರುವಂತೆ ಸದನವನ್ನು ಮುಂದೂಡಲಾಗಿದೆ.

(ಸದನವು 4.02 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಪುನಃ 26.6.06ರಂದು ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ನಿರ್ಧರಿಸಿತು)

ಅನುಬಂಧ–1

ಕರ್ನಾಟಕ ವಿಧಾನಸಭೆ

ಹನ್ನೆರಡನೇ ವಿಧಾನಸಭೆ

ಎರಡನೇ ಅಧಿವೇಶನ

(ಮುಂದುವರೆದ ಉಪವೇಶನಗಳು)

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಎರಡನೇ ತಿದ್ದುಪಡಿ) ವಿಧೇಯಕ, 2005